ಕಂಪ್ಯೂಟರ್

R|R

ರ-63

ನಿ-72 146ನೇ ಅಧಿವೇಶನ

# ಕರ್ನಾಟಕ ವಿಧಾನ ಪರಿಷತ್

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ. ಕೆ.ಹರೀಶ್ ಕುಮಾರ್ ಇವರು ದಕ್ಷಿಣ ಕನ್ನಡ ಜಿಲ್ಲೆಯ ಎಂಡೋಸಲ್ಫಾನ್ ಪೀಡಿತರಿಗೆ ಊಟ, ವಸತಿ ಚಿಕಿತ್ಸೆ ಕಲ್ಪಿಸಲು ನಿರ್ಮಿಸಲು ಉದ್ದೇಶಿಸಿರುವ ಎಂಡೋಸಲ್ಫಾನ್ ಸಂತ್ರಸ್ತರ ಶಾಶ್ವತ ಪುನರ್ವಸತಿ ಕೇಂದ್ರ ಯೋಜನೆ ಜಾರಿಯಾಗದೇ ಕಡತದಲ್ಲೇ ಬಾಕಿ ಉಳಿದು ನೆನೆಗುದಿಗೆ ಬಿದ್ದಿರುವ ಕುರಿತು ನಿಯಮ 72ರ ಅಡಿಯಲ್ಲಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರ ಹೇಳಿಕೆ:-

*******

ಕರ್ನಾಟಕ ಗೇರು ಅಭಿವೃದ್ಧಿ ನಿಗಮದವರು ದಕ್ಷಿಣ ಕನ್ನಡ , ಉತ್ತರ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಗೇರು ತೋಪುಗಳಿಗೆ 1980-81ರಿಂದ 2000-2001ರ ಅವಧಿಯಲ್ಲಿ ಎಂಡೋಸಲ್ಫಾನ್ ಕ್ರಿಮಿನಾಶಕವನ್ನು ಸಿಂಪಡಿಸಿದ ಕಾರಣ ಈ ಮೂರು ಜಿಲ್ಲೆಗಳಲ್ಲಿ ಎಂಡೋಸಲ್ಫಾನ್ ಪೀಡಿತ ಸಂತ್ರಸ್ತರು ಇದ್ದಾರೆ, ಮಾನ್ಯ ಉಚ್ಚ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ: (ಸಿವಿಲ್).213/2011ರಲ್ಲಿ ದಿನಾಂಕ: 13-5-2011ರಂದು ಎಂಡೋಸಲ್ಫಾನ್ ಉತ್ಪಾದನೆ, ತಯಾರಿಕೆ ಹಾಗೂ ಬಳಕೆಯನ್ನು ನಿಷೇಧಿಸಿ ಆದೇಶಿಸಿದೆ.

ಈ ಜಿಲ್ಲೆಗಳಲ್ಲಿನ ಎಂಡೋಸಲ್ಫಾನ್ ಪೀಡಿತರನ್ನು ಗುರುತಿಸಿ ವಿಶೇಷ ತಪಾಸಣಾ ಶಿಬಿರಗಳನ್ನು ನಡೆಸಿ, ಎಂಡೋಸಲ್ಫಾನ್ ಬಾಧಿತ ಅಂಗವಿಕಲರಿಗೆ ಆರೋಗ್ಯ ಸುಧಾರಣೆ ಕಾರ್ಯಕ್ರಮಗಳನ್ನು ಹಾಗೂ ಅಂಗವಿಕಲತೆ ಪ್ರಮಾಣ ಆಧರಿಸಿ ಮಾಸಿಕ ಮಾಸಾಶನ, ಗುರುತಿನಚೀಟಿ ಹಾಗೂ ಆರೋಗ್ಯ ಸೇವೆಗಳನ್ನು ನೀಡುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಮುಂದುವರೆದು, ಶಾಶ್ವತ ಪರಿಹಾರ ಮತ್ತು ಪುನರ್ವಸತಿ ಕೇಂದ್ರಗಳನ್ನು ನಿರ್ಮಿಸುವ ಬದಲಾಗಿ ಈಗಾಗಲೇ ಎಂಡೋಸಲ್ಫಾನ್ ಪೀಡಿತರಿಗೆ ನೀಡಲಾಗುತ್ತಿರುವ ಮಾಸಾಶನಕ್ಕೆ ಶೇಕಡ 50 % ರಷ್ಟು ಹೆಚ್ಚಿಸಿ ಮಾಸಾಶನ ವಿತರಿಸಿದರೆ ಸಂತ್ರಸ್ತರಿಗೆ ಆರ್ಥಿಕ ಭದ್ರತೆ ಒದಗಿಸಿದಂತಾಗುತ್ತದೆ ಎಂದು ನಿರ್ಧರಿಸಿ ಕಂದಾಯ ಇಲಾಖೆಯ ಆದೇಶ ಸಂಖ್ಯೆ : ಆರ್.ಡಿ 184 ಡಿಎಸ್‌ಪಿ 2019, ದಿನಾಂಕ : 03-06-2021ರಲ್ಲಿ ಈಗಾಗಲೇ ನೀಡಲಾಗುತ್ತಿರುವ ಮಿತವೇಶನಕ್ಕೆ ಶೇಕಡ 33 % ಹೆಚ್ಚಿಸಿದೆ. ಶೇ .25 % ರಿಂದ 59 % ರವರೆಗೆ ವಿಕಲಚೇತನರೆಂದು ಗುರುತಿಸಲ್ಪಟ್ಟವರಿಗೆ ಮಾಸಿಕ ರೂ.1500/- ಕ್ಕೆ ಬದಲಾಗಿ 2000/- ಮತ್ತು ಶೇ. 60 % ಮೇಲ್ಪಟ್ಟು ವಿಕಲಚೇತನರೆಂದು ಗುರುತಿಸಲ್ಪಟ್ಟವರಿಗೆ ಮಾಸಿಕ ರೂ.3000/- ಕ್ಕೆ ಬದಲಾಗಿ 4000/- ನೀಡಲಾಗುತ್ತಿದ್ದು, ಸಂತ್ರಸ್ತರ ಖಾತೆಗೆ ಜಮಾವಣೆ ಆಗುತ್ತಿದೆ .

**ಆಕುಕ 54 ಎಸ್ ಎಂ ಎಂ 2022**

(ಡಾ||ಕೆ. ಸುಧಾಕರ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು